ಪ್ರಜಾವಾಣಿ

# ಕ್ರಿಕೆಟ್: ಜೈನ್- ಜಿವಾಜಿ ವಿ.ವಿ. ನಡುವೆ ಇಂದು ಸೆಣಸಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಪಂದ್ಯದಲ್ಲಿ ಗೆಲುವು ಪಡೆದಿರುವ ದಕ್ಷಿಣ ಭಾರತದ ಚಾಂಪಿಯನ್ ವಾರ್ಸಿಟಿ ತಂಡ ಜೈನ್ ವಿ.ವಿ. ಆಟಗಾರರು ಟೊಯೊಟಾ ಯೂನಿವರ್ಸಿಟಿ ಟ್ವೆಂಟಿ-20 ಕ್ರಿಕೆಟ್ ಚಾಂಪಿಯನ್‌ಷಿಪ್‌ನ ಪ್ರಾಥಮಿಕ ಸುತ್ತಿನ ಎರಡನೇ ಪಂದ್ಯದಲ್ಲಿ ಗೆಲುವು ಸಾಧಿಸುವ ವಿಶ್ವಾಸ ಹೊಂದಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ 7.30ಕ್ಕೆ ನಡೆಯಲಿರುವ ಎರಡನೇ ಲೀಗ್ ಪಂದ್ಯದಲ್ಲಿ ಜೈನ್ ವಿ.ವಿ. ತಂಡ ವೆಸ್ಟರ್ನ್ ವಿಜಾರ್ಡ್ಸ್ (ಗುಜರಾತ್‌ನ ಜಿವಾಜಿ ವಿ.ವಿ) ಎದುರು ಪೈಪೋಟಿ ನಡೆಸಲಿದೆ.

ಮೊದಲ ಪಂದ್ಯದಲ್ಲಿ ಜೈನ್ ವಿ.ವಿ. ಈಸ್ಟರ್ನ್ ಈಗಲ್ಸ್ (ವೀರ್ ಬಹುದ್ದೂರ್ ಸಿಂಗ್ ಪುರ್ವಾಂಚಲ್ ವಿ.ವಿ.) ಎದುರು ಗೆಲುವು ಪಡೆದಿತ್ತು.